# <u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ</u>

***<u>ಸಿ.ಸಿ. ಸಂಖ್ಯೆ ಃ 538/2021</u>***

***ಚಾಸಾ ಃ 1***

***ಪ್ರಾಸಾ ಃ 1***

| | | |
|---|---|---|
| **ಹೆಸರು** | ಃ | ಎ ಎ ಜಾಕಿರಾ |
| **ಗಂಡನ ಹೆಸರು** | ಃ | ಎಂ ಎ ಮುನೀರ್ |
| **ವಯಸ್ಸು** | ಃ | 30 ವರ್ಷ |
| **ಉದ್ಯೋಗ** | ಃ | ಗೃಹಿಣಿ |
| **ವಾಸಸ್ಥಳ** | ಃ | ಬೇಗೂರು, ಪೊನ್ನಂಪೇಟೆ ತಾ|| |

## <u>ದಿನಾಂಕ ಃ *16-12-2022* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

***<u>ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದ.</u>***

ಚಾಸಾ-2 ನನ್ನ ಮಗ. ಚಾಸಾ-3 ನನ್ನ ತಂದೆ. ಚಾಸಾ4 ಹಾಗೂ 5 ರವರ ಪರಿಚಯವಿದೆ. ಅವರು ನಮ್ಮ ಮನೆಯಲ್ಲಿ ಬಾಡಿಗೆಗೆ ಇರುವವರು. ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ಗಂಡ. ದಿನಾಂಕ 20-12-2020 ರಂದು ಬೆಳಿಗ್ಗೆ ಸುಮಾರು 8.30 ಗಂಟೆಯಲ್ಲಿ ನಾನು ಅಡಿಗೆ ಮನೆಯಲ್ಲಿ ಕೆಲಸ ಮಾಡುತ್ತಿದ್ದಾಗ, ಆರೋಪಿಯಾದ ನನ್ನ ಗಂಡ ಅಲ್ಲಿಗೆ ಬಂದು ಗ್ಯಾಸ್ ಹಾಗೂ ಸ್ಟೌವ್ ನ್ನು ಎಳೆದು ಹಾಕಿ, ನೀನು ನನ್ನನ್ನು ಕುರಿತು ನೀನು ಹಾಗೂ ಮಗು ಇಲ್ಲಿ ಇರಬೇಡಿ, ಹೊರಟು ಹೋಗಿ ಎಂದು ಹೇಳಿದ್ದು, ಆಗ ನಾನು ಮನೆಯನ್ನು ಬಿಟ್ಟು ಹೋಗುವುದಿಲ್ಲ ಎಂದು ತಿಳಿಸಿದಾಗ, ಆರೋಪಿಯು ನನ್ನನ್ನು ಬೇವರ್ಸಿ, ಸೂಳೆ ಇಲ್ಲಿ ಇರಲು ನಿನಗೆ ಯೋಗ್ಯತೆ ಇಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ಹಲ್ಲೆ ಮಾಡಿದ್ದು, ನಂತರ ನಾನು ಮೊಬೈಲ್ ನಿಂದ ಆರೋಪಿ ಒಡೆಯುತ್ತಿರುವುದನ್ನು ವೀಡಿಯೋ ಮಾಡಲು ಪ್ರಯತ್ನಿಸಿದಾಗ ಆತ ನನ್ನ ಮೊಬೈಲ್ ನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದ್ದು, ಆಗ ನಾನು ಮೊಬೈಲ್ ಕೊಡಲಿಲ್ಲ, ನಂತರ ಆರೋಪಿ ಬೆಡ್ ರೂಮುನಿಂದ ಒಂದು ಕತ್ತಿಯನ್ನು ತಂದು ನನಗೆ ಕಡಿಯಲು ಬೀಸಿದಾಗ ನಾನು ಎಡಕೈಯನ್ನು ಅಡ್ಡಕೊಟ್ಟಿದ್ದು, ಆಗ ನನ್ನ ಎಡಕೈಯನ ಎರಡು ಬೆರಳುಗಳಿಗೆ ಹಾಗೂ ಅಂಗೈಗೆ ಕತ್ತಿಯ ಪೆಟ್ಟು ಗಾಯವಾಗಿರುತ್ತದೆ.

ನಂತರ ನಾನು ಸದರಿ ಗಾಯಕ್ಕೆ ಬ್ಯಾಂಡೇಜ್ ನ್ನು ಹಾಕಿಕೊಂಡು ಆಸ್ಪತ್ರೆಗೆ ಹೋಗಿರುತ್ತೇನೆ. ನಂತರ ಅಲ್ಲಿಗೆ ಪೋಲಿಸರು ಬಂದು ಸುಮಾರು 9.30 ಗಂಟೆಗೆ ಬಂದು ನನ್ನ ಹೇಳಿಕೆಯನ್ನುಪಡೆದುಕೊಂಡು ಹೋಗಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ಪೋಲಿಸರು ಆಸ್ಪತ್ರೆಗೆ ಬಂದು ನನ್ನನ್ನು ವಿಚಾರಿಸಿ, ದಾಖಲಿಸಿಕೊಂಡ ಹೇಳಿಕೆ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಹೇಳಿಕೆ ದೂರನ್ನು ನಿಪಿ1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು. ದಿನಾಂಕ 23-12-2020 ರಂದು ಪೋಲಿಸರು ನಮ್ಮ ಮನೆಗೆ ಬಂದಿದ್ದು, ನಾನು ಪೋಲಿಸರಿಗೆ ಕೃತ್ಯ ಸ್ಥಳವನ್ನು ತೋರಿಸಿ, ಆರೋಪಿಯೂ ನನ್ನನ್ನು ಕಡಿಯಲು ಬಳಸಿದ ಒಂದು ಕತ್ತಿಯನ್ನು ತೋರಿಸಿದ್ದು ಹಾಗೂ ಆರೋಪಿ ಕತ್ತಿಯಿಂದ ಹಲ್ಲೆ ಮಾಡಿದಾಗ ನನಗೆ ಆದ ಗಾಯದಿಂದ ಬಂದ ರಕ್ತವನ್ನು ಒರಿಸಿದ ಹತ್ತಿ, ಹತ್ತಿ ಸಮೇತ ಇದ್ದ ಒಣಗಿದ ರಕ್ತ, ಎರಡು ಟಿಷು ಪೇಪರ್ ಮತ್ತು ಕೃತ್ಯದ ಸಮಯದಲ್ಲಿ ನಾನು ಧರಿಸಿದ್ದ ರಕ್ತ ಕಲೆಯಿದ್ದ ಒಂದು ಶಾಲನ್ನು ಪೋಲಿಸರಿಗೆ ನೀಡಿದ ಮೇರೆಗೆ ಪೋಲಿಸರು ನನ್ನ ಹಾಗೂ ಚಾಸಾ 4 ಹಾಗೂ 5 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ ಅವುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಮಹಜರನ್ನು ಬರೆಯುವಾಗ ಪೋಲಿಸರು ಫೋಟೋ ಸಹ ತೆಗೆದಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ಪೋಲಿಸರು ಜರುಗಿಸಿದ ಮಹಜರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಮಹಜರನ್ನು ನಿಪಿ2 ಎಂದು, ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಹತ್ತು ಛಾಯಾಚಿತ್ರಗಳನ್ನು ಹಾಗೂ ಸಿಡಿಯನ್ನು ತೋರಿಸಲಾಗಿ, ಸಾಕ್ಷಿಯು ಅದು ಪೋಲಿಸರು ಮಹಜರಿನ ಸಮಯದಲ್ಲಿ ತೆಗೆದ ಭಾವಚಿತ್ರಗಳು ಹಾಗೂ ಅದರ ಸಿಡಿ ಎಂದು ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಮೇರೆಗೆ ಸದರಿ ಛಾಯಾಚಿತ್ರಗಳನ್ನು ಕ್ರಮವಾಗಿ ನಿಪಿ3 ರಿಂದ 12 ಎಂದು, ಸಿಡಿಯನ್ನು ನಿಪಿ13 ಎಂದು ಗುರುತಿಸಲಾಯಿತು.

ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಒಂದು ಕತ್ತಿ, ಒರಿಸಿದ ಹತ್ತಿ, ಹತ್ತಿ ಸಮೇತ ಇದ್ದ ಒಣಗಿದ ರಕ್ತ, ಎರಡು ಟಿಷು ಪೇಪರ್ ಹಾಗೂ ಒಂದು ಶಾಲನ್ನು ತೋರಿಸಲಾಗಿ, ಸಾಕ್ಷಿಯು ಅದು ಸದರಿ ಕತ್ತಿಯಿಂದಲೇ ಆರೋಪಿ ನನಗೆ ಹಲ್ಲೆ ಮಾಡಿರುತ್ತಾನೆ, ಹತ್ತಿಗಳು ಹಾಗೂ ಟಿಷು ಪೇಪರ್ ತೋರಿಸಲಾಗಿ, ಸಾಕ್ಷಿಯು ಅದು

ರಕ್ತವನ್ನು ಒರೆಸಿದ ಹಾಗೂ ಒಣಗಿದ ರಕ್ತ ಇರುವ ಹತ್ತಿ ಹಾಗೂ ಟಿಷು ಪೇಪರ್ ಗಳೆಂದು ಹಾಗೂ ಶಾಲು ನಾನು ಕೃತ್ಯದ ಸಮಯದಲ್ಲಿ ಧರಿಸಿದ್ದ ಶಾಲು ಎಂದು ಅವುಗಳನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಗುರುತಿಸಿದ ಮೇರೆಗೆ ಕತ್ತಿಯನ್ನು ಮು ಮಾ 1 ಎಂದು, ಸದರಿ ಕತ್ತಿಯ ಮೇಲೆ ಅಂಟಿಸಿದ ಚೀಟಿಯ ಮೇಲಿರುವ ಸಾಕ್ಷಿಯ ಸಹಿಯನ್ನು ಮು ಮಾ 1ಎ ಎಂದು, ಟಿಷು ಪೇಪರ್ ಗಳನ್ನು ಒಟ್ಟಾರೆಯಾಗಿ ಮು ಮಾ 2 ಎಂದು, ಸದರಿ ಟಿಷು ಪೇಪರ್ ಬಾಕ್ಸ್ ಮೇಲೆ ಅಂಟಿಸಿರುವ ಚೀಟಿಯ ಮೇಲಿರುವ ಸಾಕ್ಷಿಯ ಸಹಿಯನ್ನು ಮು ಮಾ 2ಎ ಎಂದು, ಕಾಟನ್ ಬಾಕ್ಸ್ ಇದ್ದ ಎರಡು ಡಬ್ಬಗಳನ್ನು ಮು ಮಾ 3 ಹಾಗೂ 4 ಎಂದು, ಸದರಿ ಕಾಟನ್ ಬಾಕ್ಸ್ ಮೇಲೆ ಅಂಟಿಸಿದ ಚೀಟಿಯ ಮೇಲಿರುವ ಸಾಕ್ಷಿಯ ಸಹಿಯನ್ನು ಮು ಮಾ 3ಎ ಹಾಗೂ 4ಎ ಎಂದು, ಶಾಲನ್ನು ಮು ಮಾ 5 ಎಂದು ಗುರುತಿಸಲಾಯಿತು. ಸದರಿ ಶಾಲಿನ ಮೇಲಿನ ಬಟ್ಟೆಯ ಮೇಲೆ ಅಂಟಿಸಿದ ಚೀಟಿಯ ಮೇಲಿರುವ ಸಾಕ್ಷಿಯ ಸಹಿಯನ್ನು ಮು ಮಾ 5ಎ ಎಂದು ಗುರುತಿಸಲಾಯಿತು.

ಆರೋಪಿ ಪರ ವಕೀಲರು ಗೈರು ಹಾಜರಾಗಿದ್ದು, ಆರೋಪಿ ಪಾಟಿ ಸವಾಲಿಗೆ ಸಮಯಾಕವಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ.

ಓ. ಹೇ. ಕೇ. ಸ. ಇದೆ.

ಸಹಿ/-

**(ಸಂತೋಷ ಕೊಠಾರಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ವಿರಾಜಪೇಟೆ.